# ಜಗತ್ತಿನ ನಾಯಿಗಳ ದೊಡ್ಡಣ್ಣ



■ ಪ್ರವೀಣ ಕುಲಕರ್ಣಿ

ಈ ನಾಯಿ ಜನ್ಮದಿನ ಆಚರಿಸಿಕೊಂಡಿದ್ದು ಇತ್ತೀಚೆಗೆ ಜಗತ್ತಿನಾದ್ಯಂತ ಸುದ್ದಿಯಾಯಿತು. ಹೇಳಿಕೇಳಿ, ಇದು ಜಗತ್ತಿನ ಎಲ್ಲ ನಾಯಿಗಳ ಪಾಲಿಗೆ 'ದೊಡ್ಡಣ್ಣ'ನಲ್ಲವೇ ಮತ್ತೆ? ಹೌದು, ಬಾಬಿ ಹೆಸರಿನ ಇದು ಜಗತ್ತಿನಲ್ಲಿಯೇ ಅತ್ಯಂತ ಹಿರಿಯ ನಾಯಿ ಎನಿಸಿದೆ. ಕಳೆದ ವಾರವಷ್ಟೇ ತನ್ನ 31ನೇ ಜನ್ಮದಿನವನ್ನೂ ಆಚರಿಸಿಕೊಂಡಿದೆ.

ಪೋರ್ಚುಗಲ್‌ನ ಕಾಂಕ್ವೆರಸ್ ಎಂಬಲ್ಲಿ ಬಿಡಾರ ಹೂಡಿರುವ ಬಾಬಿ, ಇದೇ ಹಳ್ಳಿಯಲ್ಲಿ ತನ್ನ ಬದುಕು ಸವೆಸಿದೆ. ರೆಫೆರೊ ಡು ಅಲೆಂಟೆಜೊ ತಳಿಯ ಈ ನಾಯಿಯ ಹುಟ್ಟುಹಬ್ಬವನ್ನು ಸಾಂಪ್ರದಾಯಿಕ ಪೋರ್ಚುಗಲ್ ಶೈಲಿಯಲ್ಲಿ ಬಲು ವಿಜೃಂಭಣೆಯಿಂದ ಆಚರಿಸಲಾಯಿತು. ಬಾಬಿಯ ಒಡೆಯ ಲಿಯೊನಲ್ ಕೋಸ್ಟಾ ಬರ್ತ್‌ಡೇ ಪಾರ್ಟಿಯನ್ನು ಆಯೋಜಿಸಿದ್ದರು. ಬರೋಬ್ಬರಿ ನೂರು ಮಂದಿ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಮೀನು–ಮಾಂಸದ ಸಮಾರಾಧನೆಯೇ ಈ ಸಮಾರಂಭದಲ್ಲಿ ನಡೆಯಿತು. ಬಾಬಿಗೂ ಮನುಷ್ಯರಿಗೆ ಸಿದ್ಧಪಡಿಸಿದ ಊಟವೇ ಬೇಕಂತೆ. ಹೀಗಾಗಿ ಭೂರಿ ಭೋಜನದಲ್ಲಿ ಅದಕ್ಕೂ ಪಾಲಿತ್ತು. ಬರ್ತ್‌ಡೇ ಪಾರ್ಟಿ ಎಂದಮೇಲೆ ಕೇಳಬೇಕೇ? ಸಂಗೀತ–ನೃತ್ಯದ ಔತಣವೂ ಅಲ್ಲಿತ್ತು.

ಇಂತಿಪ್ಪ ಬಾಬಿಯು ತನ್ನ ಜೀವನದಲ್ಲಿ ಇದುವರೆಗೆ ಒಂದೇ ಒಂದು ದಿನವೂ ತನ್ನೂರು ಕಾಂಕ್ವೆರಸ್ ಬಿಟ್ಟು ಹೊರಹೋಗಿಲ್ಲವಂತೆ. ದೇಶ ಸುತ್ತದಿದ್ದರೂ ತನ್ನೂರಿನ ಇಂಚಿಂಚನ್ನೂ ಬಿಡದಂತೆ ಸುತ್ತಿದೆಯಂತೆ. ವಾಸ್ತವವಾಗಿ, ಬಾಬಿಯ ಒಡೆಯ ಕೋಸ್ಟಾ ಶ್ವಾನಪ್ರಿಯ. ಹಲವು ವಯಸ್ಸಾದ ನಾಯಿಗಳು ಅವರ ಬಳಿ ಇದ್ದವು. ಬಾಬಿಯ ಅಮ್ಮ ಗಿರಾ ಸಹ ಕೋಸ್ಟಾ ಅವರ ಕುಟುಂಬದ ಸದಸ್ಯಳಾಗಿತ್ತು. ಆದರೆ, ಗಿರಾ ಅಸುನೀಗಿದಾಗ ಅದಕ್ಕೆ 18 ವರ್ಷಗಳಾಗಿದ್ದವು. '30 ವರ್ಷ ವಯೋಮಾನ ದಾಟಿದ ಒಂದು ನಾಯಿಯೂ ನಮ್ಮೂರಿನಲ್ಲಿ ಇದ್ದ ನೆನಪಿಲ್ಲ. ಆದರೆ, ಬಾಬಿ ಸಮೃದ್ಧ ಜೀವನವನ್ನು ನಡೆಸಿತು. ಅದರ ದೀರ್ಘಾಯುಷ್ಯ ನನಗೆ ಖುಷಿ ತಂದಿದೆ' ಎಂದು ಕೋಸ್ಟಾ ಹೇಳುತ್ತಾರೆ. ಸಾಮಾನ್ಯವಾಗಿ ನಾಯಿಗಳ ಜೀವಿತಾವಧಿ ಸರಾಸರಿ 12ರಿಂದ 16 ವರ್ಷ ಎಂಬುದೊಂದು ಅಂದಾಜು.

ಬಾಬಿಯ ದೀರ್ಘಾಯುಷ್ಯದ ಗುಟ್ಟೇನು? ಈ ಪ್ರಶ್ನೆಯನ್ನು ಕೋಸ್ಟಾ ಅವರ ಕುಟುಂಬದ ಮುಂದಿಟ್ಟರೆ 'ಸಮಾಧಾನ ಚಿತ್ತ, ಶಾಂತ ಸ್ವಭಾವವೇ ಅದರ ಆಯುಷ್ಯವನ್ನು ಲಂಬಿಸುತ್ತಾ ಬಂದಿದೆ' ಎಂದು ಉತ್ತರಿಸುತ್ತಾರೆ. ಬಾಬಿಗೆ ಎಂದಿಗೂ ಚೈನ್‌ನಲ್ಲಿ ಬಂಧಿಸಿ, ಒಂದೆಡೆ ಕೂಡಿ ಹಾಕಿಲ್ಲ. ಮನೆಯ ಹತ್ತಿರದ ಕಾಡಿನಲ್ಲೂ ಅದು ಮುಕ್ತವಾಗಿ ಓಡಾಡಿ ಬರಲು ಅವಕಾಶ ಗಿಟ್ಟಿಸಿದೆ. ಬೇಸರವಾದಾಗ ಮನೆಯ ಒಂದು ಬದಿಯಿಂದ ಇನ್ನೊಂದು ಬದಿಗೆ ಹೋಗಿ ವಿಶ್ರಮಿಸುವ ಅವಕಾಶವೂ ಅದಕ್ಕಿದೆ. ಓಣಿಯ ಇತರ ನಾಯಿಗಳು, ಸಾಕುಪ್ರಾಣಿಗಳ ಜತೆ ಬೆಳೆದಿದ್ದರಿಂದ ಬಾಬಿ ಒಂದು 'ಸಂಘ ಜೀವಿ'ಯಾಗಿದೆ. ಸದ್ಯ ಬಾಳಸಂಧ್ಯೆಯಲ್ಲಿರುವ ಬಾಬಿಗೆ ಸರಿಯಾಗಿ ನಡೆಯಲು ಆಗದು. ದೃಷ್ಟಿ ಸಹ ಮಂಜಾಗಿದೆ. ಹೀಗಾಗಿ ನಡೆದಾಡುವಾಗ ದಾರಿಯಲ್ಲಿ ಏನಾದರೂ ವಸ್ತುಗಳು ಇದ್ದರೆ ಎಡವಿ ಬೀಳುತ್ತದೆ. ಯೌವನದ ದಿನಗಳಲ್ಲಿ ಖುಷಿಯಿಂದ ನಡೆಸುತ್ತಿದ್ದ ಅರಣ್ಯ ವಿಹಾರದ ಉಮೇದು ಈಗಿಲ್ಲ. ಮನೆಯ ಅಂಗಳದಲ್ಲಿಯೇ ಕಾಲ ಕಳೆಯುವ ಬಾಬಿ, ಸುತ್ತಾಟಕ್ಕೆ ಹೋಗದಿರುವುದಕ್ಕೆ ವಿಷಾದಿಸುವುದಿಲ್ಲ. ವಯಸ್ಸಾದ ಮನುಷ್ಯರಂತೆಯೇ ಅದಕ್ಕೂ ನಿದ್ದೆಯಲ್ಲಿ ಹೆಚ್ಚಿನ ಕಾಲ ಕಳೆಯುವುದರಲ್ಲೇ ತೃಪ್ತಿ. ಊಟ ಮುಗಿಸಿದೊಡನೆ ಸೀದಾ ಹಾಸಿಗೆ ಮೇಲೆ ಹೋಗಿ ಜಾರುತ್ತದೆ. ಚಳಿ ಹೆಚ್ಚಾಗಿರುವ ದಿನಗಳಲ್ಲಿ ಅಗ್ಗಿಷ್ಟಿಕೆ ಮುಂದೆ ನಿದ್ದೆ ಹೊಡೆಯುತ್ತದೆ.

ಬಾಬಿಗೆ 30 ವರ್ಷಗಳಾಗಿವೆ ಎಂದರೆ ಸುಮ್ಮನೆ ನಂಬಿಬಿಡಬೇಕೇ? ಪತ್ರಕರ್ತರ ಇಂತಹ 'ಸಂಶೋಧನಾ' ಮನೋಭಾವ ಅವರನ್ನು ಸೀದಾ ಲೇರಿಯಾದ ಪಶುವೈದ್ಯಕೀಯ ಸೇವಾ ಕೇಂದ್ರಕ್ಕೆ ಕರೆದೊಯ್ದಿತು. ಅಲ್ಲಿ ಬಾಬಿ 1992ರಲ್ಲಿ ಜನಿಸಿರುವ ದಾಖಲಾತಿ ಆ ತಂಡಕ್ಕೆ ಸಿಕ್ಕಿತು. ಆ ತಂಡವೇ 'ಬಾಬಿಗೆ ಮೂವತ್ತು' ಎಂದು ಹುಯಿಲು ಎಬ್ಬಿಸಿದ್ದರಿಂದ ಜಗತ್ತಿನಾದ್ಯಂತ ಈ ನಾಯಿ ರಾತ್ರಿ ಬೆಳಗಾಗುವ ಹೊತ್ತಿಗೆ ಮನೆಮಾತಾಯಿತು. ಪೋರ್ಚುಗೀಸ್ ಸರ್ಕಾರದ ಪ್ರಾಣಿ ದತ್ತಾಂಶ ಇಲಾಖೆಯು ಬಾಬಿಯನ್ನು ತಪಾಸಣೆ ಮಾಡಿದ್ದು, ಅದಕ್ಕೆ ಮೂವತ್ತು ವರ್ಷ ವಯಸ್ಸಾಗಿದ್ದನ್ನು ಖಚಿತಪಡಿಸಿದೆ. ಕೋಸ್ಟಾ ಅವರಿಗೆ ಈಗ 38ರ ಹರೆಯ. ಬಾಬಿ ಜನಿಸಿದಾಗ ಅವರು ಎಂಟು ವರ್ಷದ ಬಾಲಕನಾಗಿದ್ದರಂತೆ.

'ನನ್ನ ಇದುವರೆಗಿನ ಜೀವನದ ಅನುಭವಗಳು, ಕಳೆದುಹೋದ ನನ್ನ ಸಂಬಂಧಿಗಳು ನನ್ನ ಸ್ಮೃತಿಪಟಲದಲ್ಲಿ ಮೂಡಲು ಬಾಬಿ ಕಾರಣವಾಗುತ್ತದೆ. ಅದು ನನ್ನ ಮುಂದೊಮ್ಮೆ ಸುಳಿದುಹೋಯಿತೆಂದರೆ ಕಳೆದುಹೋದ ನನ್ನ ತಂದೆ–ತಾಯಿ, ಅಜ್ಜ, ಅಜ್ಜಿ, ನನ್ನ ಸಹೋದರ ಎಲ್ಲರೂ ನನ್ನ ಕಣ್ಮುಂದೆ ಬರುತ್ತಾರೆ. ಮೂರು ತಲೆಮಾರಿನ ಕೊಂಡಿಯಾಗಿ ಅದು ಗೋಚರಿಸುತ್ತದೆ' ಎಂದು ಹೇಳುವಾಗ ಕೋಸ್ಟಾ ಅವರ ಕಣ್ಣುಗಳು ನೀರಿನಿಂದ ಹೊಳೆಯುತ್ತವೆ. ಏನೂ ಗೊತ್ತಾಗದ ಬಾಬಿ ಅವರ ಪಾದದಡಿಯಲ್ಲೇ ಕಣ್ಮುಚ್ಚಿ ಆರಾಮವಾಗಿ ನಿದ್ರೆಯಲ್ಲಿ ಕಾಲ ಕಳೆಯುತ್ತಿರುತ್ತದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65